MYSORE LEGISLATIVE ASSEMBLY

THIRTY-THIRD DAY.

Monday, 4th April 1955.

The House met in the Legislative Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Petitions in Government Offices (Disposal).

Q.—490. **Sri H. T. PUTTAPPA** (Hoskote-Anekal—Scheduled Castes).—

Will the Government be pleased to state :—

the steps taken by them for the disposal of applications submitted by poor people, which are pending disposal for a number of years in several offices of the Government ?

A.—**Sri Kadidal MANJAPPA** (Minister for Revenue and Public Works).—

(*a*) *Vide* answer to Question No. 176 in the March 1951 Budget Session of the Assembly noted below :—

> " The attention of the Hon'ble Member is invited to Chapters II and V of the Manual of General Circulars and Standing Orders, Part I and to the several orders of Government issued in this behalf. Copies of the orders are placed on the Table."

ಶ್ರೀ ಎಚ್. ಟಿ. ಪುಟ್ಟಪ್ಪ.—ಬಡ ರೈತರು ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿ ಬಹಳ ದಿವಸಗಳಾದರೂ ಅವು ಇತ್ಯರ್ಥವಾಗದೆ ಹಾಗೆಯೇ ನಿಂತುಹೋದರೆ ಬಹಳ ತೊಂದರೆಯಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆ.

ಶ್ರೀ ಹೆಚ್. ಟಿ. ಪುಟ್ಟಪ್ಪ.—ಹಾಗೆ ಆಗದೆ ಬಹಳ ಜಾಗ್ರತೆಯಾಗಿ ಇತ್ಯರ್ಥವಾಗುವಂತೆ ಏರ್ಪಾಡು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇ ಮಾಡುತ್ತಿದ್ದೇವೆ. ನಾನು ಅನಿರೀಕ್ಷಿತವಾಗಿ ಕೆಲವು ಆಫೀಸುಗಳಿಗೆ ಭೇಟಿ ಕೊಟ್ಟು ತನಿಖೆ ಮಾಡಿದ್ದೇನೆ. Revenue Commissioner ಮತ್ತು Special Officer for Efficiency Audit, ಇವರೂ ಕೂಡ ಅದೇ ರೀತಿ ಅನಿರೀಕ್ಷಿತವಾಗಿ ಕೆಲವು ಆಫೀಸುಗಳಿಗೆ ಭೇಟಿಕೊಟ್ಟು ತನಿಖೆ ಮಾಡ ತ್ತಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಕೂಡ ಕೆಲವು ಸಂದರ್ಭಗಳಲ್ಲಿ ಅರ್ಜಿಗಳು ಏಲೇವಾರಿಯಾಗದೆ ತಡವಾಗುತ್ತಿದೆ. ನಮ್ಮ ಕೈಲಾದ ಪ್ರಯತ್ನವೆಲ್ಲವನ್ನೂ ಕೂಡ ಮಾಡುತ್ತಿದ್ದೇವೆ ಎಂದು ಮಾನ್ಯ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅರ್ಜಿಗಳ ಜೊತೆಯಲ್ಲಿ, ಜವಾಬುಕೊಡಿ ಎಂದು ಪೋಸ್ಟ್‌ಕಾರ್ಡ್ ಅಥವಾ ಕವರುಗಳನ್ನು ಕಳುಹಿಸಿದರೂ ಕೂಡ reply ಕೊಡಬೇಕಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—Rules ವಿಧಾಯಕವಾದ ರೀತಿಯಲ್ಲಿ ಪೋಸ್ಟಲ್ ಸ್ಟಾಂಪ್ ಕಳುಹಿಸಿಕೊಟ್ಟರೆ ಜವಾಬನ್ನು ಕೊಡಲೇಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಆ ರೀತಿ ಇದುವರೆಗೂ ಅನೇಕ ಕಡೆ ಬಂದಿಲ್ಲ. ಅದನ್ನು ವಿಚಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರ ಮಾಡುತ್ತೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ತಾವು ಹೋದ ಪ್ರತಿಯೊಂದು ಕಡೆಯಲ್ಲೂ ನೋಡುತ್ತಿದ್ದೇವೆ, ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಒಂದು ವರ್ಷ, ಎರಡು ವರ್ಷ ಹೀಗೆ ಅರ್ಜಿಗಳು pending ಆಗಿರುವ ಕಡೆ ಏನೇನು disciplinary action ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—Pending ಎಂದರೆ ಎಲ್ಲಾ ಸಂದರ್ಭಗಳಲ್ಲೂ ತಲೆಗೆಲ್ಲಾ ಒಂದೇ ಮಂತ್ರ ದಂತೆ ಮಾಡುವುದಕ್ಕೆ ಆಗುವುದಿಲ್ಲ. ಉದಾಹರಣೆ ಹೇಳುವುದಾದರೆ, ಯಾವುದಾದರೂ ಒಂದು ಜಮೀನಿಗೆ ದರಖಾಸ್ತು ಹಾಕಿದ್ದರೆ, ಆ ಜಮೀನು reserve ಜಮೀನಾಗಿದ್ದರೆ ಅದಕ್ಕೆ ಬೇಕಾದಷ್ಟು ಪತ್ರ ವ್ಯವಹಾರಗಳು ನಡೆಯಬೇಕು. ಅಂಥ ಸಂದರ್ಭಗಳಲ್ಲಿ ಸ್ವಾಭಾವಿಕವಾಗಿ ತಡವಾಗುತ್ತದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅಂಥಾ ಸಂದರ್ಭಗಳಲ್ಲಿ ಎಷ್ಟು ದಿವಸಗಳಾಗಬಹುದು ಎಂಬುದನ್ನು ತಿಳಿಸಲು ಒಂದು endorsement ಏಕೆ ಕೊಡಬಾರದು ?

ಶ್ರೀ ಕಡಿದಾಳ್ ಮಂಜಪ್ಪ.—ವಿಧಾಯಕವಾದ ರೀತಿಯಲ್ಲಿ ಸ್ಟಾಂಪನ್ನು ಇಟ್ಟರೆ endorsement ಕೊಡುತ್ತೇವೆ. ಒಂದು ಮಾತು ಹೇಳುವುದಾದರೆ ನನಗೆ ದಿವಸಕ್ಕೆ 100 ಅರ್ಜಿಗಳು ಬರುತ್ತವೆ. ಜನರಲ್ ಸ್ಟಾಂಪ್ ಹಾಕುವುದಿರಲಿ, ಮೂರುಕಾಸಿನ ಸ್ಟಾಂಪನ್ನೂ ಹಾಕುವುದಿಲ್ಲ. ಬಡವರಿಗೆ ತೊಂದರೆಯಾಗಬಹುದೆಂದು ತಿಳಿದು ಅರ್ಜಿಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಅವಕ್ಕೆಲ್ಲಾ ಸ್ಟಾಂಪನ್ನು ಇಟ್ಟರೆ ಜವಾಬು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ತಾವುಗಳೆಲ್ಲರೂ ಮಂತ್ರಿಗಳು ಬೆಂಗಳೂರಿನಲ್ಲಿದ್ದೀರಿ. ರೈತರು ತಾಲ್ಲೂಕು ಆಫೀಸಿಗೆ ವಾರಕ್ಕೊಂದು ಸಲ ಹೋಗಿ ತಮ್ಮ ಅರ್ಜಿ ವಿಚಾರ ಏನಾಗಿದೆ ಎಂದು ಕೇಳತಕ್ಕ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಆ ರೀತಿ ಇರಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅಂಥ ಸಂದರ್ಭಗಳಲ್ಲಿ ಗುಮಾಸ್ತರುಗಳು ಅಥವಾ ಅಮಲ್ದಾರರು ಗಳು ಜವಾಬು ಕೊಡುವುದಕ್ಕೆ ಏನು ತೊಂದರೆ ಯಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅರ್ಜಿಯಮೇಲೆ ಅವಲಂಬಿಸುತ್ತದೆ. ತಕ್ಷಣ ಜವಾಬನ್ನು ಕೊಡುವುದಕ್ಕೆ ಸಾಧ್ಯವಿದ್ದರೆ ಅಮಲ್ದಾರರು ಜವಾಬು ಕೊಡುವುದು ನೂಕ್ತ. ಜವಾಬನ್ನು ತಕ್ಷಣ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಕೆಲವು ಕಾಲ ಹಿಡಿಯುತ್ತದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಯಾವ ತಕರಾರೂ ಇಲ್ಲದ, ಬಂಜರು ಅಥವಾ ಗೋಮಾಳವಲ್ಲದೆ ಇತರತಕ್ಕ ಜಮೀನನ್ನು ಕೊಡಿ ಎಂದು ಕೇಳುವ ಸಂದರ್ಭದಲ್ಲಿ ವರ್ಷಗಟ್ಟಲೆ ತಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿದೆ. ಆಗ ಶಿಸ್ತಿನ ಕ್ರಮ ಕೂಡ ಸಂಬಂಧಪಟ್ಟ ಅಧಿಕಾರಿಗಳಮೇಲೆ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅವರ ಜಿಲ್ಲೆಯ ಒಂದು ತಾಲ್ಲೂಕು ಆಫೀಸಿಗೆ ಹೋಗಿ ಅನಿರೀಕ್ಷಿತವಾಗಿ ತನಿಖೆ ಮಾಡಿದೆ. ಬೇಕಾದಷ್ಟು ಕಾಗದ ಪತ್ರಗಳು ವಿಲೇವಾರಿಯಾಗದೆ ಬಿದ್ದಿದ್ದುವು.

ಶ್ರೀ ಬಿ. ಎಚ್. ಬೋರಣ್ಣಗೌಡ.—ರೆವಿನ್ಯೂ ಅಧಿಕಾರಿಗಳಿಗೆ ಈ ರೀತಿಯ ಪತ್ರ ವ್ಯವಹಾರ ಮಾಡಿ ವಿಲೇವಾರಿ ಮಾಡುವುದಲ್ಲದೆ ಇನ್ನೇನು ಕೆಲಸವಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಾಕಿ ಕೆಲಸ ಬೇಕಾದಷ್ಟು ಇದೆ. ಸಂಸ್ಕೃತಿ ಪ್ರಚಾರದಿಂದ ಹಿಡಿದು collection of land revenue ವರೆಗೆ ಬಹಳ ಕೆಲಸಗಳಿವೆ. ಮಾನ್ಯ ಸದಸ್ಯರು ಹೋದರೆ, ಅವರುಗಳ ಜೊತೆಯಲ್ಲಿ ಪ್ರವಾಸ ಮಾಡುವುದು ಕೂಡ ಸೇರುತ್ತದೆ. ಅನೇಕ ಕೆಲಸಗಳನ್ನು ಅವರಮೇಲೆ ಹಾಕಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅವರಿಗೆ ಕೆಲಸ ಹೆಚ್ಚು ಎಂದು ಕಂಡುಬಂದರೆ ಇನ್ನೂ ಒಬ್ಬರನ್ನು ನೇಮಿಸುವುದಕ್ಕೆ ತೊಂದರೆ ಏನಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಆಡಳಿತ ಕ್ಕೋಸ್ಕರ ಹೆಚ್ಚು ಖರ್ಚಾಗುತ್ತಿದೆ ಎಂದು ಮಾನ್ಯ ಸದಸ್ಯರು ಟೀಕೆಮಾಡುತ್ತಿದ್ದಾರೆ. ಆ ರೀತಿಯ ಸಲಹೆ ಕೂಡ ಸರ್ಕಾರದ ಮುಂದೆ ಇದೆ. ಕೆಲವು ತಾಲ್ಲೂಕು ಗಳಲ್ಲಿ ಡೆಪ್ಯುಟಿ ಅಮಲ್ದಾರರುಗಳನ್ನು ನೇಮಕ ಮಾಡ ಬೇಕೆಂದು ಮೇಲ್ಪಟ್ಟ ಅಧಿಕಾರಿಗಳು ಸಲಹೆ ಮಾಡಿದ್ದಾರೆ. ಸರ್ಕಾರದವರು ಇನ್ನೂ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ರೆವಿನ್ಯೂ ಅಧಿಕಾರಿಗಳು 20 ದಿವಸ tour ಮಾಡಬೇಕೆಂದು ವಿಧಾಯಕವಾಗಿದ್ದರೂ, ಆ ರೀತಿ ಟೂರ್ ಮಾಡುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಯಲು ಅವರುಗಳ ಡೈರಿ ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Revenue Commissioner ಮತ್ತು Deputy Commissioner ಇವರುಗಳಿಗೆ ಸಂಬಂಧಪಟ್ಟ ಡೈರಿಗಳು ಬರುತ್ತವೆ.

Sri B. N. BORANNA GOWDA.—Do you feel that my supplementaries are not relevant ?

Mr. SPEAKER.—Everything under this question is relevant because this question is so vague and general. The members should restrict themselves as to the number of supplementaries they wish to put. From next time I do not think that this will happen.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅವರು ಸರಿಯಾಗಿ tour ಮಾಡಿದರೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವುದಕ್ಕೋಸ್ಕರ sample ಆಗಿ ಎರಡು-ಮೂರು ತಾಲ್ಲೂಕುಗಳಿಂದ ಡೈರಿಗಳನ್ನು ತರಿಸಿ ನೋಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಎಸ್. ಸಿದ್ದಪ್ಪ.—ತಾಲ್ಲೂಕು ಅಮಲ್ದಾರರು ಗಳು ಈ ರೀತಿಯಾಗಿ ಬರತಕ್ಕ ದರಖಾಸ್ತು ಅರ್ಜಿಗಳನ್ನು ಆಯಾ ಗ್ರಾಮಗಳಲ್ಲೇ ಹೋಗಿ ಫೈನಲು ಮಾಡಿ, ಜಾಗ್ರತೆ ಅವರವರ ಬದುಕುಗಳಿಗೆ ಅನುಕೂಲ ಮಾಡಿಕೊಡುವುದಕ್ಕೂ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀಮಾನ್ ಪಟ್ಟಾಭಿರಾಮರ್ ಅವರು ಆ ರೀತಿಯಾದ ಒಂದು ಸಲಹೆ ಕೊಟ್ಟಿದ್ದಾರೆ. ಅದರಂತೆ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಆ ರೀತಿಯಾಗಿ ಒಂದು ಆಜ್ಞೆಯನ್ನು ಸಂಸ್ಥಾನಾಮಳಿ ಜಾರಿಗೆ ತರುವುದಕ್ಕೆ ಕಾನೂನೊಂದನ್ನು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಬೇಕಾಗಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ತಾವು ಕಚೇರಿಗೆ ಭೇಟಿ ಕೊಟ್ಟಾಗ ಅನೇಕ ವರ್ಷಗಳಿಂದ ಅಲ್ಲಿ ಬಾಕಿ ನಿಂತಿರುವುದು ತಮ್ಮ ಗಮನಕ್ಕೆ ಬಂದಿತೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಬಂದಿದೆ.

ಶ್ರೀ ಡಿ. ಆರ್. ಕರಿಗೌಡ.—ಏನು ಶಿಕ್ಷೆ ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಯಾರು ತಡವಾಗುವುದಕ್ಕೆ ಕಾರಣರಾಗಿದ್ದರೋ ಅವರು ರಿಜೈರ್ ಆಗಿರುತ್ತಾರೆ, ಅಥವಾ ಎಲ್ಲರು ತಾತ್ಕಾರೋ ಗೊತ್ತಿರುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಇದರಿಂದ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲವೇ, ಇಂಥ ಇನ್‌ಸ್ಪೆಕ್ಷನ್‌ಗಳಿಂದ ಏನೂ ತೊಂದರೆಯಾಗುವುದಿಲ್ಲ, ಇವೆಲ್ಲಾ ಪ್ರಯೋಜನವಿಲ್ಲದವುಗಳು ಎಂದು ?

ಶ್ರೀ ಕಡಿದಾಳ್ ಮಂಜಪ್ಪ.—ಇದರಿಂದಾಗಿ ಕಾಗದ ಪತ್ರಗಳ ವಿಲೇವಾರಿ ಬಹಳಮಟ್ಟಿಗೆ ಉತ್ತಮವಾಗಿದೆ ಯೆಂದು ಗೊತ್ತಾಗಿದೆ. ಮೊದಲಿದ್ದ ಪರಿಸ್ಥಿತಿಗಿಂತಲೂ ಈಗ ಉತ್ತಮವಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ತಾಲ್ಲೂಕಾಫೀಸನ್ನು ಅನಿರೀಕ್ಷಿತವಾಗಿ ಭೇಟಿ ಮಾಡಿದಾಗ ತಡವಾಗುವುದಕ್ಕೆ ಜವಾಬ್ದಾರರು ಯಾರೆಂಬುದನ್ನು ಗೊತ್ತುಮಾಡುವುದಕ್ಕೆ ಸಾಧ್ಯವಾಗಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನಾಗಲೇ ಹೇಳಿದ ಹಾಗೆ ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿ ರಿಜೈರ್ ಆಗಿರುತ್ತಾನೆ. ಇನ್ನು ಕೆಲವು ಸಂದರ್ಭಗಳಲ್ಲಿ ಕಾಗದ ಪತ್ರಗಳು ಅನೇಕರ ಕೈಗೆ ಹೋಗುವುದರಿಂದ ಎಲ್ಲೆಲ್ಲಿ ಎಷ್ಟೆಷ್ಟು ಕಾಲ ಹಿಡಿಯುತ್ತದೆ ಎಂಬು

ದನ್ನು ನೋಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರಿಜ್ಯೆರ್ ಆಗದೆ ಕೆಲಸ ಮಾಡುತ್ತಿರುವವರ ಮೇಲೆ ಕಾರ್ಯಕ್ರಮ ಕೈಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೇರವಾಗಿ ಆಯಾ ಕ್ಷೇತ್ರದ ಸದಸ್ಯರು ಬಂದು ಕಾಗದ ಪತ್ರವನ್ನು, ಅರ್ಜಿಯನ್ನು ಕೊಡುವಾಗಲೂ ಸ್ಟ್ಯಾಂಪನ್ನು ಹಚ್ಚಿ ಕೊಡಬೇಕೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ರೀತಿ ಆಗಿದ್ದರೆ ಅದನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಕೆಲವು ದಿವಸಗಳ ಹಿಂದೆಯೇ ಹೇಳಿದಂತೆ ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಹೆಚ್ಚು ಹೆಚ್ಚಿಗೆ ಅಧಿಕಾರವನ್ನು ಸ್ಥಳೀಯ ಅಧಿಕಾರಿಗಳಿಗೆ ಕೊಡಬೇಕೆಂದು ಸರ್ಕಾರದವರ ಉದ್ದೇಶ. ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಒಂದು ತೀರ್ಮಾನವನ್ನು ಕೈಕೊಳ್ಳುತ್ತೇವೆ.

ಶ್ರೀ ಜಿ. ಪಾಪಣ್ಣ.—ರಿಜ್ಯೆರ್ ಆಗಿರುವ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗುತ್ತದೆ. ಅವರ ಪೆರ್ಷಕ್ಟ್ ಹಿಡಿಯಬಹುದು.

ಶ್ರೀ ಜಿ. ಪಾಪಣ್ಣ.—ಏಕೆ ಮಾಡುವುದಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ cumulative effect in several cases of delay ಇರುತ್ತದೆ. ಅಂಥ ಸಂದರ್ಭಗಳಲ್ಲಿ action ತೆಗೆದುಕೊಳ್ಳಬೇಕೆಂದರೆ ಬಹಳ ಮಂದಿಯನ್ನು ಮನೆಗೇ ಕಳುಹಿಸಬೇಕಾಗುತ್ತದೆ.

ಶ್ರೀ ಜಿ. ಪಾಪಣ್ಣ.—ಜನರಿಗೆ ಎಷ್ಟು ತೊಂದರೆ ಯಾದರೂ ಪರವಾಯಿಲ್ಲ, ಅಧಿಕಾರಿಗಳಿಗೆ ತೊಂದರೆ ಕೊಡಕೂಡದೆಂದು ಉದ್ದೇಶವೇ ?

ಶ್ರೀ ಕಡಿದಾಳ್ ಮಂಜಪ್ಪ.—ಜನರಿಗೆ ತೊಂದರೆ ಕೊಡಕೂಡದೆಂದೇ ಉದ್ದೇಶ. ಈಗಿನ ಆಡಳಿತ ಪದ್ಧತಿ, ಮೊದಲಿನಿಂದಲೂ ನಡೆದುಕೊಂಡು ಬಂದಿರುವ ವ್ಯವಸ್ಥೆ, ಅಧಿಕಾರಿಗಳ ಮನೋಭಾವ—ಇವೆಲ್ಲಾ ಇದಕ್ಕೆ ಕಾರಣವೆಂದು ಹೇಳುತ್ತೇನೆ. ಅಲ್ಲದೆ, ನಾನು surprise inspectionಗಳಿಗೆ ಹೋದಾಗ ಏನಾದರೂ ತೊಂದರೆಯಿದೆಯೇ ಎಂದು ಜನರನ್ನು ಕೇಳಿದರೆ, ಏನೂ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಈ ಸಭೆಯ ಮಾನ್ಯ ಸದಸ್ಯರುಗಳು ಏನಾದರೂ ವಿಷಯವನ್ನು ಅಮಲ್ದಾರರನ್ನು, ಡೆಪ್ಯುಟಿ ಕಮಿಷನರನ್ನು ಕೇಳಿದರೆ, ಅದಕ್ಕೆ ತಿಂಗಳುಗಟ್ಟಲೆ ಜವಾಬೇ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಅಂಥಾದ್ದನ್ನು ತಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ.

ಶ್ರೀ ಕೆ. ವಿ. ಬೈರೇಗೌಡ.—ಅರ್ಜಿಗಳಲ್ಲಿ ಎರಡು ತರಹ ಇರುತ್ತವೆ; ಒಂದು ಖಾನಗಿ ಅರ್ಜಿಗಳು, ಇನ್ನೊಂದು ಸಾರ್ವಜನಿಕರಿಗೆ ಸಂಬಂಧಪಟ್ಟವು. ಇವುಗಳಲ್ಲಿ ಸಾರ್ವಜನಿಕರಿಗೆ ಸಂಬಂಧಪಟ್ಟ ಅರ್ಜಿಗಳ ಮೇಲೆ ಏನು ಕಾರ್ಯಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನರಾನರಿ ನೂರು ಅರ್ಜಿಗಳು ಬರುತ್ತಿರುತ್ತವೆ. ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುತ್ತೇನೆ. ಅದಾದಮೇಲೆ ಅವೇನಾಗುತ್ತವೆಂದು ಪತ್ತೆಹಚ್ಚಬೇಕಾದರೆ ಎಷ್ಟು ಸಿಬ್ಬಂದಿ ಬೇಕಾಗುತ್ತದೆಂಬುದನ್ನು ಮಾನ್ಯ ಸದಸ್ಯರೇ ಯೋಚಿಸಬಹುದು.

ಶ್ರೀ ಕೆ. ವಿ. ಬೈರೇಗೌಡ.—ಎಷ್ಟೋ ವೇಳೆ ಅಕ್ಸಿಸಿರ್ಷ್ ವಗೈರೆಗಳಿಗೆ ಅರ್ಜಿಗಳನ್ನು ಕೊಡುತ್ತಾರೆ. ಅವು ಯಾವ stageನಲ್ಲಿವೆಯೆಂದು ಗೊತ್ತೇ ಆಗುವುದಿಲ್ಲ. ಅವುಗಳನ್ನೇನು ಮಾಡುತ್ತಾರೋ, ಅಥವಾ file ಮಾಡಿರುತ್ತಾರೋ ಒಂದೂ ಗೊತ್ತಾಗುವುದಿಲ್ಲ. ಇಂಥವುಗಳನ್ನು ಹೇಗೆ ತಿಳಿಯಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—File ಆಗುವುದಿಲ್ಲ. ಅಕ್ಸಿಸಿರ್ಷ್ ವಿಚಾರ ಹೇಳುವುದಾದರೆ, ಒಂದು ಪಾರ್ಟಿಯವರು ಅಕ್ಸಿಸಿರ್ಷ್ ಮಾಡಬೇಕು ಎಂದು ಹೇಳುತ್ತಾರೆ, ಮತ್ತೊಂದು ಪಾರ್ಟಿಯವರು ಬೇಡ ಎಂದು ಹೇಳುತ್ತಾರೆ. ಅಪೀಲ್ ಹೋಗುವ ಸಂದರ್ಭಗಳೂ ಉಂಟು. ಈ ಕಾರಣಗಳಿಂದ ಅಕ್ಸಿಸಿರ್ಷ್ ಕೇಸುಗಳು ತಡವಾಗುತ್ತವೆ.

Sri S. SRINIVASA IYENGAR.—In the course of his surprise visits, has the Hon'ble Minister noticed any petition in the Taluk Office without even being numbered ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಜಿಲ್ಲೆಯಲ್ಲೇ ಒಂದು ತಾಲ್ಲೂಕಾಫೀಸಿನಲ್ಲಿ ಒಂದು surprise inspection ನಡೆಸಿದೆ. ನೂರಾರು ಅರ್ಜಿಗಳನ್ನು ಪರ್ಸನಲ್ ರಿಜಿಸ್ಟರ್ ಎಂಬ ಒಂದು ರಿಜಿಸ್ಟರಿನಲ್ಲಿ ಗುಮಾಸ್ತರು ಇಟ್ಟುಕೊಂಡಿದ್ದರು. ಅನಿರೀಕ್ಷಿತವಾಗಿ ಅದು ನನ್ನ ಕೈಗೆ ಸಿಕ್ಕಿತು. ಅದರಮೇಲೆ personal register ಎಂದು ಇಡಕೂಡದೆಂದು ಹೇಳಿ ಎಲ್ಲವನ್ನೂ ಸಂಬಂಧಪಟ್ಟ ರಿಜಿಸ್ಟರಿನಲ್ಲೇ ದಾಖಲು ಮಾಡಬೇಕೆಂದು ಸೂಚನೆ ಕೊಡಲಾಗಿದೆ.

Sri S. SRINIVASA IYENGAR.—Will the Government be pleased to state whether they have prescribed any register called the Petition Register for each taluk office ?

Sri Kadidal MANJAPPA.—Yes, they have maintained registers.

Sri S. SRINIVASA IYENGAR.—Has it come to the notice of the Hon'ble Minister that this register is not being properly maintained in any of the Taluk Offices ?

Sri Kadidal MANJAPPA.—They have been maintained but, as I have submitted just now, in some cases these petitions were registered in the Personal Register of the clerk and not in the proper register.

Sri S. SRINIVASA IYENGAR.—Will the Government issue instructions at least to note the stages at which

(SRI S. SRINIVASA IYENGAR.)

the subjects contained in the petitions stand in that petition register ?

Sri Kadidal MANJAPPA.—Oh yes. It is quite possible to make out from the petition register the stage at which a matter stands.

ಶ್ರೀ ಟಿ. ಸಿ. ಬಸಪ್ಪ.—ಎಷ್ಟು ತಾಲ್ಲೂಕುಗಳಲ್ಲಿ ರೈತರುಗಳಿಂದ ಬರತಕ್ಕ ಅರ್ಜಿಗಳನ್ನು ಸ್ವೀಕರಿಸಿ ಅಧಿಕಾರಿಗಳು acknowledge ಮಾಡುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಮೊದಲೇ ಹೇಳಿದಹಾಗೆ ವಿಧಾಯಕವಾದ ರೀತಿಯಲ್ಲಿ ಸ್ಟ್ಯಾಂಪು ಕೊಟ್ಟರೆ acknowledge ಮಾಡುತ್ತಾರೆ.

ಶ್ರೀ ಟಿ. ಸಿ. ಬಸಪ್ಪ.—ಈಗ ಎಷ್ಟು ತಾಲ್ಲೂಕುಗಳಲ್ಲಿ ಆ ರೀತಿ ಮಾಡುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ತಾಲ್ಲೂಕುಗಳಲ್ಲೂ ಸ್ಟ್ಯಾಂಪುಕೊಟ್ಟರೆ ಮಾಡುತ್ತಾರೆ.

ಶ್ರೀ ಟಿ. ಸಿ. ಬಸಪ್ಪ.—Personal ಆಗಿ ಅರ್ಜಿ ಕೊಟ್ಟರೆ ಅದನ್ನೂ acknowledge ಮಾಡುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೂ ಕೂಡ ಸ್ಟ್ಯಾಂಪ್ ಕೊಟ್ಟರೆ ಮಾಡುತ್ತಾರೆ.

ಶ್ರೀ ಟಿ. ಸಿ. ಬಸಪ್ಪ.—Personal ಆಗಿ ಕೊಟ್ಟರೆ ಸ್ಟ್ಯಾಂಪ್ ಏಕೆ ?

ಶ್ರೀ ಕಡಿದಾಳ್ ಮಂಜಪ್ಪ.—Acknowledge ಮಾಡುವುದಕ್ಕೆ stamp ಖರ್ಚಾಗುತ್ತದೆ.

ಶ್ರೀ ಟಿ. ಸಿ. ಬಸಪ್ಪ.—Postal ಸ್ಟ್ಯಾಂಪೇ ಅಥವಾ ರಸೀತಿ ಸ್ಟ್ಯಾಂಪೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಸಂದರ್ಭಗಳಲ್ಲಿ acknowledge ಮಾಡುತ್ತಾರೆಂದು ಭಾವನೆ.

ಶ್ರೀ ಟಿ. ಸಿ. ಬಸಪ್ಪ.—ಕೆಲವು ತಾಲ್ಲೂಕ್ ಆಫೀಸುಗಳಲ್ಲಿ 6 ತಿಂಗಳಿಗೂ ಮೇಲ್ಪಟ್ಟು ಕಾಲ pending ಆಗಿದ್ದರೆ, ಅಂಥವುಗಳ ಬಗ್ಗೆ ಸರ್ಕಾರದವರು ನೇರವಾಗಿ ಒಂದು pendency ರಿಪೋರ್ಟನ್ನು ಏಕೆ ತರಿಸಿಕೂಡದು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆರು ತಿಂಗಳಿಗೆ ಮೇಲ್ಪಟ್ಟು ಇರುವ ಅರ್ಜಿಗಳು ಬಹಳ ಕಡಿಮೆ.

ಶ್ರೀ ಟಿ. ಸಿ. ಬಸಪ್ಪ.—ನನ್ನ ಜೊತೆಯಲ್ಲಿ ಬನ್ನಿ, ಬಹಳವಾಗಿರುವುದನ್ನು ತೋರಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅಕ್ವಿಜಿಷ್ಟ್ ಕೇಸುಗಳು, ದರಖಾಸ್ತು ಕೇಸುಗಳು—ಇಂಥವುಗಳು delay ಆಗುತ್ತವೆ. ಎಲ್ಲೆಲ್ಲಿ forests, date groves, tank bunds ಮುಂತಾದುವುಗಳಿಗೆ ಸಂಬಂಧಪಟ್ಟ ಕೇಸುಗಳಿರುತ್ತವೆಯೋ ಅಲ್ಲಿ dispose ಆಗುವುದು delay ಆಗುತ್ತದೆ.

Unserviceable Electric Transformers.

Q.—12. **Sri T. C. BASAPPA** (Tarikere Constituency).—

Will the Government be pleased to state :—

(*a*) how many electric transformers have been removed as unserviceable since last five years (for each year and for each division) and their cost ;

(*b*) what are the main reasons for their unserviceableness ;

(*c*) what is the number of transformers that became unserviceable due to negligence of officers (figures to be given for 5 years separately) and number of cases and the amount recovered ?

A.—**Dr. R. NAGAN GOWDA** (Minister for Agriculture).—

(*a*)

Section	1950-51	1951-52	1952-53	1953-54	1954-55 (9 months)	Total
B.P.L. City Area ...	1	2	8	2	4	17
,, Civil Area ...	1	21	12	5	11	50
Mysore Power and Light ...	5	27	30	58	50	170
Kanakapura ,, ...	2	9	12	22	6	51
Chikballapura ,, ...	1	7	14	30	38	90
Bhadravathi ,, ...	...	6	8	3	5	22
Hassan ,, ...	...	...	6	1	3	10
K.G.F. ,, ...	1	9	3	4	3	20
Jog ,, ...	...	4	3	5	7	19
Slvasamudram and Shimshapura.	1	5	...	4	6	16
Bellary ...	...	...	...	...	...	...
Total ...	12	90	96	134	133	465